**2025 ವಿಶ್ವ ಸುವಾರ್ತಾ ಪ್ರಸಾರ ಭಾನುವಾರಕ್ಕೆ**
**ದಿವಂಗತ ವಿಶ್ವಗುರು ಪೋಪ್ ಫ್ರಾನ್ಸಿಸರ ಸಂದೇಶ**
**19 ಅಕ್ಟೋಬರ್ 2025**

ವಿಶ್ವದ ಸರ್ವ ಜನಾಂಗಗಳ ಭರವಸೆಯಾಗಿರುವ ಸುವಾರ್ತಾ ಪ್ರಸಾರಕರು

**ಆತ್ಮೀಯ ಸಹೋದರ ಸಹೋದರಿಯರೇ,**

ಭರವಸೆಯೇ ಪ್ರಧಾನ ಸಂದೇಶವಾಗಿರುವ 2025ರ ಜೂಬಿಲಿ ವರ್ಷದ ವಿಶ್ವ ಸುವಾರ್ತಾ ಪ್ರಸಾರ ಭಾನುವಾರಕ್ಕೆ (cf. Bull Spes Non Confundit, 1), ನಾನು ಆರಿಸಿದ ಧ್ಯೇಯ ವಾಕ್ಯ: "ವಿಶ್ವದ ಸರ್ವ ಜನಾಂಗಗಳ ಭರವಸೆಯಾಗಿರುವ ಸುವಾರ್ತಾ ಪ್ರಸಾರಕರು." ಕ್ರೈಸ್ತರಲ್ಲಿ ಪ್ರತಿಯೋರ್ವರಿಗೂ, ವಿಶ್ವ ಧರ್ಮಸಭೆಗೂ, ದೀಕ್ಷಾಸ್ನಾನದಿಂದ ಸಮುದಾಯವಾಗಿರುವವರಿಗೂ ಈ ಧ್ಯೇಯ ವಾಕ್ಯವು ಜ್ಞಾಪಿಸುವುದೇನೆಂದರೆ: ನಾವೆಲ್ಲರೂ ಪ್ರಭು ಕ್ರಿಸ್ತರ ಹೆಜ್ಜೆಗಳಲ್ಲಿ ಹೆಜ್ಜೆಗಳನಿಡುತ್ತಾ ಭರವಸೆಯ ಸಂದೇಶವಾಹಕರಾಗುವ ಹಾಗೂ ಶಿಲ್ಪಿಗಳಾಗುವ ಪ್ರಧಾನ ಕರೆಯನ್ನು ಹೊಂದಿದವರಾಗಿದ್ದೇವೆ. ನಮ್ಮೆಲ್ಲರಿಗೂ ಪುನರುತ್ಥಾನಿ ಕ್ರಿಸ್ತರಲ್ಲಿ ಜೀವಂತ ನಿರೀಕ್ಷೆಗೆ (1ಪೇತ್ರ 1:3–4) ನವಜನ್ಮವನ್ನು ನೀಡಿರುವ ನಂಬಿಗಸ್ತ ದೇವರೊಂದಿಗೆ ಇದೊಂದು ಕೃಪಾವರದ ಕಾಲವಾಗಲಿ ಎಂದು ನಾನು ಹಾರೈಸುತ್ತೇನೆ. ಇಲ್ಲಿ ನಾನು ನಮ್ಮ ಕ್ರೈಸ್ತ ಸುವಾರ್ತಾ ಕಾರ್ಯವನ್ನು ಕುರಿತು ಕೆಲವು ಅಂಶಗಳನ್ನು ಪ್ರಸ್ತಾಪಿಸಲಿದ್ದೇನೆ. ಈ ಮೂಲಕ ನಾವೆಲ್ಲರೂ ದೇವರಾತ್ಮರಿಂದ ಪ್ರೇರಣೆಯನ್ನು ಪಡೆಯುವವರಾಗಲಿ ಹಾಗೂ ಧರ್ಮಸಭೆಯಲ್ಲಿ ವಿನೂತನವಾದ ಸುವಾರ್ತ ಪ್ರಸಾರ ಕಾಲಕ್ಕಾಗಿ ನಮ್ಮಲ್ಲಿ ಉತ್ಕಟವಾದ ಉತ್ಸಾಹ ಮೂಡಿ ಬರಲಿ. ಏಕೆಂದರೆ ಧರ್ಮಸಭೆಯು ಈ ಲೋಕದಲ್ಲಿ ಆವರಿಸಿರುವ ಅಂಧಕಾರದ ಛಾಯೆಯ ಮಧ್ಯೆ ಭರವಸೆಯನ್ನು ಬೇರೂರಿಸುವುದಕ್ಕಾಗಿ ನಿಯೋಜಿಸಲ್ಪಟ್ಟಿದೆ (cf. Fratelli Tutti 9-55).

1. **ನಮ್ಮ ಭರವಸೆಯಾಗಿರುವ ಕ್ರಿಸ್ತರ ಹೆಜ್ಜೆಗಳಲ್ಲಿ:**

2000 ಪವಿತ್ರ ವರ್ಷದ ನಂತರ ಮೂರನೇ ಸಹಸ್ರಮಾನದ ಸಾಮಾನ್ಯ ಜೂಬಿಲಿಯನ್ನು ನಾವು ಆಚರಿಸುತ್ತಿರುವಾಗ ನಾವು "ನಿನ್ನೆ ಇದ್ದ ಹಾಗೆ ಇಂದೂ ಎಂದೆಂದೂ" (ಹಿಬ್ರಿಯರಿಗೆ 13:8) ಇರುವ ಇತಿಹಾಸದ ಕೇಂದ್ರ ಬಿಂದುವಾಗಿರುವ ಕ್ರಿಸ್ತರ ಮೇಲೆ ನಮ್ಮ ದೃಷ್ಟಿಯನ್ನಿಡುತ್ತಿದ್ದೇವೆ. ನಜರೇತಿನ ಪ್ರಾರ್ಥನಾ ಮಂದಿರದಲ್ಲಿ ಯೇಸು, ದೇವರ ವಾಕ್ಯವು "ಇಂದು" ಅಂದರೆ ಇತಿಹಾಸದಲ್ಲಿ ತನ್ನ ಇರುವಿಕೆಯ ಸಮಯದಲ್ಲಿ ನೆರವೇರಿತು ಎಂದು ಘೋಷಿಸಿದರು. ಹೀಗೆ ಅವರು ದೈವೀರಾಜ್ಯದ ಸುವಾರ್ತೆಯನ್ನು ಸಾರಲು ಮತ್ತು ದೇವರು ತಮ್ಮ ಜನತೆಯನ್ನು ಉದ್ಧರಿಸುವ ಕಾಲವನ್ನು ಆರಂಭಿಸಲು ಪವಿತ್ರಾತ್ಮರಿಂದ ಅಭಿಷೇಕಿಸಲ್ಪಟ್ಟು ತಂದೆಯಿಂದ ಕಳುಹಿಸಲ್ಪಟ್ಟವರು ಎಂಬುದನ್ನು ಪ್ರಕಟಿಸಿದರು (cf. ಲೂಕ 4:16–21).

ಅವರ ರಹಸ್ಯಾತ್ಮಕ "ಇಂದು" ಇಲ್ಲಿ ಪ್ರಸನ್ನರಾಗಿದ್ದ ಕ್ರಿಸ್ತರು ಲೋಕಾಂತ್ಯದವರೆಗೂ ಇರುವವರಾಗಿದ್ದು ಸರ್ವರಿಗೂ ವಿಶೇಷವಾಗಿ 'ದೇವರೇ ತಮ್ಮ ಭರವಸೆ' ಎಂದುಕೊಂಡಿರುವವರಿಗೆ ರಕ್ಷಣೆಯ ಪರಿಪೂರ್ಣತೆಯಾಗಿದ್ದಾರೆ. ತಮ್ಮ ಇಹಲೋಕದ ಜೀವನದಲ್ಲಿ ಅವರು ನೊಂದವರಿಗೆ ಹಾಗೂ ಸರ್ವ ಜನತೆಗೆ ದೇವರಲ್ಲಿ ಭರವಸೆ ಮರಳಿ ಬರುವಂತೆ ಮಾಡಿ ಎಲ್ಲೆಡೆಯಲ್ಲೂ ಒಳಿತನ್ನು ಮಾಡುತ್ತಾ, ಪಿಶಾಚಿ ಪೀಡಿತರಾದವರನ್ನು ಸ್ವಸ್ಥಪಡಿಸುತ್ತಾ ಸಂಚರಿಸಿದರು (ಪ್ರೇ.ಕಾ.10:38). ಅವರು ಪಾಪವೊಂದನ್ನು ಬಿಟ್ಟು ನಮ್ಮೆಲ್ಲರ ಎಲ್ಲಾ ಬಲಹೀನತೆಗಳನ್ನು ಅನುಭವಿಸಿದರು, ಅದರಲ್ಲೂ ಗೆತ್ಸೆಮನಿ ತೋಪಿನಲ್ಲಿ ಮತ್ತು ಶಿಲುಬೆಯ ಮೇಲೆ ಕಠಿಣವಾದ ಯಾತನೆಯನ್ನು ಅನುಭವಿಸಿದರು. ಮನುಕುಲದ ರಕ್ಷಣೆಗಾಗಿ ಹಾಗೂ ಭವಿಷ್ಯದ ಶಾಂತಿಗಾಗಿ ತಂದೆಯು ಮಾಡಿದ್ದ ಯೋಜನೆಗೆ ಪ್ರಭುಯೇಸು ವಿಧೇಯತೆಯನ್ನು ತೋರಿಸುತ್ತಾ, ಸರ್ವಸ್ವವನ್ನು ತಂದೆಯ ವಶಕ್ಕೆ ಸಮರ್ಪಿಸುತ್ತಾ, ಉತ್ತಮ ಭವಿಷ್ಯದ ಭರವಸೆಯನ್ನು ಮೂಡಿಸಿದರು (ಯೆರೇಮಿಯಾ 29:11). ಹೀಗೆ ಅವರು ಭರವಸೆಯ ದೈವೀ ಸುವಾರ್ತ ಪ್ರಸಾರಕರಾದರು. ಮಾತ್ರವಲ್ಲದೆ ಶತಶತಮಾನಗಳ ಧರ್ಮಸಭೆಯ ಇತಿಹಾಸದಲ್ಲಿ ಎಲ್ಲಾ ಅಡ್ಡಿ ಆತಂಕಗಳ

ಮಧ್ಯೆ, ದೇವರು ತಮಗೆ ವಹಿಸಿರುವ ಸುವಾರ್ತಾ ಪ್ರಸಾರ ಸೇವಾಕಾರ್ಯವನ್ನು ಮಾಡುವವರಿಗೆ ಅತ್ಯುನ್ನತ ಮಾದರಿಯಾದರು.

ಸಮಸ್ತ ಜನಾಂಗಗಳ ಬಳಿ ಕಳುಹಿಸಲ್ಪಟ್ಟ ಹಾಗೂ ಅವರ ಜೊತೆ ರಹಸ್ಯಾತ್ಮಕವಾಗಿ ತಾವೇ ಸಾಗುವ ತಮ್ಮ ಶಿಷ್ಯರ ಮುಖಾಂತರ ಪ್ರಭುಯೇಸು ಮನುಕುಲಕ್ಕೆ ತಮ್ಮ ಭರವಸೆಯ ಸುವಾರ್ತಾ ಸೇವೆಯನ್ನು ಮುಂದುವರಿಸುತ್ತಿದ್ದಾರೆ. ಅವರು ಈಗಲೂ ಬಡವರ, ನೊಂದವರ ನಿರಾಶೆಗೆ ಒಳಗಾದವರ ಹಾಗೂ ಶೋಷಿತರ ಸೇವೆಯನ್ನು ಮಾಡುತ್ತಾ "ಅವರ ಗಾಯಗಳ ಮೇಲೆ ಉಪಶಮನ ಎಂಬ ಎಣ್ಣೆಯನ್ನು ಹಚ್ಚಿ, ಭರವಸೆ ಎಂಬ ದ್ರಾಕ್ಷಾರಸವನ್ನು ಲೇಪಿಸುತ್ತಾರೆ" (Preface "Jesus the Good Samaritan"). ಧರ್ಮಸಭೆಯು ತನ್ನ ಪ್ರಭು ಹಾಗೂ ಬೋಧಕರಾಗಿರುವ ಅವರಿಗೆ ವಿಧೇಯತೆಯನ್ನು ತೋರಿಸುತ್ತಾ, ಅವರಂತೆ ಸೇವಾ ಮನೋಧರ್ಮದಿಂದ ವರ್ತಿಸುವ ಪ್ರಭುಕ್ರಿಸ್ತರ ಸುವಾರ್ತ ಪ್ರಸಾರಸೇವೆಯ ಶಿಷ್ಯವೃಂದವಾಗಿ ಸುವಾರ್ತ ಪ್ರಸಾರ ಕಾರ್ಯವನ್ನು ಮುಂದುವರಿಸುತ್ತದೆ, ಮಾತ್ರವಲ್ಲದೆ, ಎಲ್ಲಾ ದೇಶಗಳಲ್ಲೂ ತನ್ನ ಜೀವನವನ್ನು ಸರ್ವರಿಗಾಗಿ ಸಮರ್ಪಿಸುತ್ತದೆ. ಹಿಂಸಾಚಾರಗಳ, ಕಷ್ಟಯಾತನೆಗಳ, ತೊಂದರೆ ತೊಡಕುಗಳ ಮಧ್ಯೆಯೂ, ತನ್ನ ಸಮುದಾಯದ ಸದಸ್ಯರುಗಳ ಬಲಹೀನತೆಗಳಿಂದಾಗಿ ಉದ್ಭವಿಸುವ ಸಮಸ್ಯೆಗಳ ಮತ್ತು ಸೋಲುಗಳ ಮಧ್ಯೆಯೂ ಧರ್ಮಸಭೆಯು, ಪ್ರಭು ಕ್ರಿಸ್ತರ ಪ್ರೀತಿಯಿಂದ ಸದಾ ಪ್ರೇರಣೆ ಪಡೆದು, ಅವರೊಂದಿಗೆ ಐಕ್ಯವಾಗಿ ತನ್ನ ಸುವಾರ್ತಾ ಪ್ರಸಾರ ಯಾತ್ರೆಯಲ್ಲಿ ನೊಂದ ಜನರ ಧ್ವನಿಗೆ, ಅಂತೆಯೇ ರಕ್ಷಣೆಗಾಗಿ ಕಾದಿರುವ ಸೃಷ್ಟಿ ಸಮಸ್ತರ ಧ್ವನಿಗೆ ಸ್ಪಂದಿಸುತ್ತದೆ. ತನ್ನ ಹೆಜ್ಜೆಯಲ್ಲಿ ಹೆಜ್ಜೆಯಿಟ್ಟು ನಡೆಯುವ ಇಂತಹ ಧರ್ಮಸಭೆಯನ್ನು ಪ್ರಭುಯೇಸು ಈ ಲೋಕದ ಬೀದಿಗಳಲ್ಲಿ ಕಾಣಬಯಸುತ್ತಾರೆ. ಸಾಂಸ್ಥಿಕತೆಯಿಂದ ನಿಂತ ನೀರಾಗಿರುವ ಧರ್ಮಸಭೆಯನ್ನಲ್ಲ, ಬದಲಾಗಿ ಸುವಾರ್ತ ಪ್ರಸಾರ ಸೇವಾ ಕಾರ್ಯದ ಧರ್ಮಸಭೆಯನ್ನು ಪ್ರಭುಯೇಸು ಕಾಣಬಯಸುತ್ತಾರೆ. (Homily at the concluding Mass of the Ordinary General Assembly of the Synod of Bishops, 27th October, 2024).

ಪ್ರಭು ಯೇಸುವಿನ ಹೆಜ್ಜೆಗಳಲ್ಲಿ ಹೆಜ್ಜೆಯಿಟ್ಟು ನಡೆಯಲು ನಾವು ಸಹ ಅವರಿಂದ ಪ್ರೇರಣೆಯನ್ನು ಪಡೆಯೋಣ. ಹೀಗೆ ನಾವು ಅವರೊಂದಿಗೆ ಅವರಲ್ಲಿ ದೇವರು ನಮಗೆ ಕರುಣಿಸಿರುವ ಎಲ್ಲಾ ಸ್ಥಳಗಳಲ್ಲೂ, ಸನ್ನಿವೇಶಗಳಲ್ಲೂ ಸರ್ವರಿಗೂ ಭರವಸೆಯ ಸಾಧನಗಳು ಮತ್ತು ಭರವಸೆಯ ದೂತರುಗಳಾಗೋಣ. ದೀಕ್ಷಾಸ್ನಾನ ಪಡೆದಿರುವ ನಾವೆಲ್ಲರೂ ಪ್ರಭುಕ್ರಿಸ್ತರ ಸುವಾರ್ತ ಪ್ರಸಾರ ಶಿಷ್ಯರಾಗಿ ಪ್ರಪಂಚದ ಮೂಲೆಮೂಲೆಗಳಲ್ಲೂ ಭರವಸೆಯನ್ನು ಬೆಳಗಿಸುವವರಾಗೋಣ.

2. **ಜನಾಂಗಗಳೆಲ್ಲರ ಮಧ್ಯೆ ಭರವಸೆಯ ಪ್ರಸಾರಕರೂ, ದೂತರೂ ಆಗಿರುವ ಕ್ರೈಸ್ತರು:**

ಪ್ರಭುಯೇಸುವನ್ನು ಹಿಂಬಾಲಿಸುತ್ತಾ ಕ್ರೈಸ್ತರು ತಾವು ಭೇಟಿಯಾಗುವ ಜನರಿಗೆ ಸುವಾರ್ತೆಯ ಸ್ಪರ್ಶವನ್ನು ನೀಡುತ್ತಾ, ಅವರ ಅನುದಿನದ ವಾಸ್ತವಿಕ ಸನ್ನಿವೇಶಗಳಲ್ಲಿ ಅವರೊಂದಿಗೆ ಇದ್ದು ಅವರಲ್ಲಿ ಭರವಸೆ ತುಂಬುವವರಾಗುತ್ತಾರೆ. ಹೀಗೆ ಅವರು ಭರವಸೆಯನ್ನು ಮೂಡಿಸುವವರೂ, ಭರವಸೆಯ ದೂತರೂ ಆಗುತ್ತಾರೆ. "ಏಕೆಂದರೆ ಪ್ರಸ್ತುತ ಎಲ್ಲಾ ಜನರ, ಅದರಲ್ಲೂ ಬಡವರ ಹಾಗೂ ನೊಂದವರ ಸಂತಸ, ಭರವಸೆಗಳು ಮತ್ತು ನೋವು ಹಾಗೂ ತಲ್ಲಣಗಳು, ಕ್ರಿಸ್ತರನ್ನು ಹಿಂಬಾಲಿಸುವವರ ಸಂತಸ ಭರವಸೆಗಳೂ ಹಾಗೂ ನೋವು ತಲ್ಲಣಗಳೂ ಆಗಿವೆ. ನೈಜತೆಯಿಂದ ಕೂಡಿದ ಯಾವುದೇ ಮಾನವೀಯ ಘಟನೆಗಳಿಗೆ ಅವರ ಹೃದಯ ಸ್ಪಂದಿಸುತ್ತದೆ" (Gaudium et Spes 1).

ಕ್ರೈಸ್ತ ಸಮುದಾಯಗಳ ಸರ್ವಕಾಲಿಕ ಮನೋಭಾವವನ್ನೂ, ಕಾರ್ಯಶೈಲಿಯನ್ನೂ ವ್ಯಕ್ತಪಡಿಸುವ ದ್ವಿತೀಯ ವ್ಯಾಟಿಕನ್ ಸಮ್ಮೇಳನದ ಈ ಸುಪ್ರಸಿದ್ದ ಸಂದೇಶವು ಈ ಸಮುದಾಯಗಳ ಸದಸ್ಯರಿಗೆ ಪೇರಣೆಯಾಗಿ ಅವರು ಲೋಕದಲ್ಲಿರುವ ಅವರ ಸಹೋದರ ಸಹೋದರಿಯರೊಂದಿಗೆ ಹೆಜ್ಜೆ ಹಾಕಿ ಸಾಗಲು ನೆರವಾಗುತ್ತದೆ. ಈ ಸಂದರ್ಭದಲ್ಲಿ ನಾನು, ನಿಮ್ಮಲ್ಲಿ ಯಾರು ಸುವಾರ್ತ ಪ್ರಸಾರ ಸೇವಾಕಾರ್ಯಕ್ಕಾಗಿ ಪರದೇಶಗಳಿಗೆ ಹೋಗಿದ್ದಾರೆ, ಅವರನ್ನು ನೆನೆಸಿಕೊಳ್ಳುತ್ತಿದ್ದೇನೆ. ಪ್ರಭುವಿನ ಕರೆಗೆ ಓಗೊಟ್ಟು ಪರದೇಶಗಳಿಗೆ ಹೋಗಿ ಅಲ್ಲಿ ದೇವರ ಪ್ರೀತಿಯ ಕ್ರಿಸ್ತೀಯ ಅನುಭವವನ್ನು ಧಾರೆಯೆರೆಯುತ್ತಿರುವಿರಿ. ಇದಕ್ಕಾಗಿ ನಾನು ನಿಮ್ಮನ್ನು ಹೃದಯಪೂರ್ವಕವಾಗಿ ಅಭಿನಂದಿಸುತ್ತೇನೆ. ಸರ್ವ ಜನಾಂಗಗಳಿಗೂ ಸುವಾರ್ತೆಯನ್ನು ಸಾರಬೇಕೆಂಬ ಪುನರುತ್ಥಾನಿ ಕ್ರಿಸ್ತರ ಆಜ್ಞೆಗೆ ನಿಮ್ಮ ಜೀವನವು ದಿಟ್ಟ ಉತ್ತರವಾಗಿದೆ (cf. ಮತ್ತಾಯ 28:18–20). ಈ ಮೂಲಕ, ನೀವು

ಪವಿತ್ರಾತ್ಮರ ಶಕ್ತಿಯಿಂದ ಹಾಗೂ ನಿಮ್ಮ ಅನುದಿನದ ಪ್ರಯತ್ನದಿಂದ, ದೀಕ್ಷಾಸ್ನಾನಾರ್ಥಿಗಳ ಸಾರ್ವತ್ರಿಕ ಕರೆಗನುಸಾರ ನಡೆಯುತ್ತಾ, ಜನಾಂಗಗಳೆಲ್ಲರ ಮಧ್ಯೆ ಸುವಾರ್ತ ಪ್ರಸಾರಕರಾಗುತ್ತೀರಿ ಹಾಗೂ ಪ್ರಭುಯೇಸು ನಮಗೆ ನೀಡಿರುವ ಮಹಾನ್ ಭರವಸೆಗೆ ಸಾಕ್ಷಿಗಳಾಗುತ್ತೀರಿ.

ಭರವಸೆಯ ಈ ಪರಿಧಿಯು ಈ ಲೋಕದ ಅಳಿದು ಹೋಗುವ ಸ್ಥಿತಿಗತಿಗಳಿಗೆ ಮಾತ್ರ ಸೀಮಿತವಾಗದೆ ಈಗಾಗಲೇ ನಾವು ಅನುಭವಿಸುತ್ತಿರುವ ದೈವಿಕ ಅನುಭವಗಳತ್ತ ನಮ್ಮನ್ನು ಕೊಂಡೊಯ್ಯುತ್ತದೆ. ಸಂತ 6ನೇ ಪೌಲರು ನಮ್ಮ ಗಮನಕ್ಕೆ ತರುವಂತೆ, ದೇವರ ಕರುಣೆಯ ಕೊಡುಗೆಯಾಗಿ ಧರ್ಮಸಭೆಯು ನಮಗೆ ದಯಪಾಲಿಸುವ ಕ್ರಿಸ್ತ ರಕ್ಷಣೆಯು ಕೇವಲ ಈ ಲೋಕದ ಅಭಿಲಾಷೆಗಳಿಗೆ, ಭರವಸೆಗಳಿಗೆ, ವಿದ್ಯಮಾನಗಳಿಗೆ ಮತ್ತು ಹೋರಾಟಗಳಿಗೆ ಮಾತ್ರ ಸಂಬಂಧಿಸಿರುವ ಲೌಕಿಕ ವ್ಯವಹಾರವಲ್ಲ ಅಥವಾ ಆಧ್ಯಾತ್ಮಿಕ ವ್ಯವಹಾರವಲ್ಲ. ಬದಲಾಗಿ ಅದು ಎಲ್ಲಾ ಇಂತಹ ಮಿತಿಗಳನ್ನು ಮೀರಿ ನಮ್ಮನ್ನು ಆ ಏಕೈಕ ಪರಮ ಪಾವನರಾಗಿರುವ ದೇವರೊಂದಿಗೆ ಐಕ್ಯಗೊಳಿಸುವ ಪರಿಪೂರ್ಣತೆಯ ದಿವ್ಯ ಸ್ಥಿತಿಯಾಗಿದೆ. ಈ ರಕ್ಷಣೆಯು ಅಲೌಕಿಕ ಮತ್ತು ಲೋಕಾಂತ್ಯಕ್ಕೆ ಸಂಬಂಧಪಟ್ಟದ್ದಾಗಿದೆ. ಇದು ನಿತ್ಯ ಜೀವನದಲ್ಲಿ ಪರಿಪೂರ್ಣಗೊಳ್ಳುತ್ತದೆ. (Evangelii Nuntiandi, 27)

ಈ ಮಹಾನ್ ಭರವಸೆಯಿಂದ ಪ್ರಚೋದಿಸಲ್ಪಟ್ಟು ಕ್ರೈಸ್ತ ಸಮುದಾಯಗಳು ಅಸಹಾಯಕತೆ, ಏಕಾಂಗಿತನ, ಹಿರಿಯರ ಬಗ್ಗೆ ಅಸಡ್ಡೆ, ನೆರವಿಗಾಗಿ ಕೈಚಾಚುತ್ತಿರುವ ನೆರೆಹೊರೆಯವರ ಬಗ್ಗೆ ಅಲಕ್ಷ್ಯದಿಂದ ತುಂಬಿರುವ ಮಹಾನ್ "ಪ್ರಗತಿ" ಹೊಂದಿರುವ. ಆದರೆ ಮಾನವೀಯತೆ ಕಳೆದುಕೊಂಡಿರುವ ಕಡೆಗಳಲ್ಲಿ ಮಾನವೀಯತೆಯ ನವ ಮಾನವ ಸಮಾಜವನ್ನು ನಿರ್ಮಿಸಲು ಮುಂದೆ ಬರಬಹುದಾಗಿದೆ. ತಾಂತ್ರಿಕತೆಯಲ್ಲಿ ತುಂಬಾ ಮುಂದಿರುವ ದೇಶಗಳಲ್ಲಿ ಇಂದು "ಭಾವೈಕ್ಯತೆ" ಮಾಯವಾಗುತ್ತಿದೆ, ನಾವೆಲ್ಲಾ ಇಂದು ಪರಸ್ಪರ ಸಂಪರ್ಕದಲ್ಲಿ ಇದ್ದೇವೆ, ಆದರೆ ನಮ್ಮ ಮಧ್ಯೆ ಸಂಬಂಧ ಇಲ್ಲವಾಗಿದೆ. ದಕ್ಷತೆಯ ಬಗ್ಗೆ ಅಧಿಕ ಮುತುವರ್ಜಿ, ಲೌಕಿಕ ವಸ್ತುಗಳ ಬಗ್ಗೆ ಅಧಿಕ ಕಾಳಜಿ ಮತ್ತು ವ್ಯಾಮೋಹ – ಇವೆಲ್ಲಾ ನಮ್ಮನ್ನು ಸ್ವ–ಕೇಂದ್ರಿತ ವ್ಯಕ್ತಿಗಳನ್ನಾಗಿ ಮಾಡಿ ಪರ–ಪ್ರೀತಿಯ ಬಗ್ಗೆ ತಾತ್ಸಾರ ಭಾವನೆಯನ್ನು ನಮ್ಮಲ್ಲಿ ಮೂಡಿಸಿವೆ. ಆದರೆ ನಾವು ಸಾಮುದಾಯಿಕ ಜೀವನದಲ್ಲಿ ಅನುಭವಿಸುವ ಸುವಾರ್ತೆಯು ನಮ್ಮೆಲ್ಲರನ್ನು ಮರಳಿ ಪರಿಪೂರ್ಣತೆಯುಳ್ಳ, ಆರೋಗ್ಯದಾಯಕ, ರಕ್ಷಣೆಯನ್ನು ಹೊಂದಿದ ಮನುಷ್ಯರನ್ನಾಗಿ ಮಾರ್ಪಡಿಸಬಹುದು.

ಈ ಕಾರಣದಿಂದ ನಾನು ಮಗದೊಮ್ಮೆ ನನ್ನ ಜೂಬಿಲಿ ಆದೇಶದ ಕಡೆ ನಿಮ್ಮ ಗಮನ ಸೆಳೆಯುತ್ತಾ, ಅದರಲ್ಲಿ ನಾನು ಪ್ರಸ್ತಾಪಿಸಿರುವ ಎಲ್ಲಾ ಕಾರ್ಯಗಳನ್ನು ಮಾಡಲು ನಿಮಗೆ ಕರೆ ನೀಡುತ್ತೇನೆ (Bull of Indiction of the Jubilee (Nos. 7–15). ಈ ಕಾರ್ಯಗಳನ್ನು ನೆರವೇರಿಸುವಾಗ ವಿಶೇಷವಾಗಿ ಅತಿ ಬಡತನದಲ್ಲಿರುವವರ ಬಗ್ಗೆ, ಬಲಹೀನರ ಬಗ್ಗೆ, ರೋಗ ಪೀಡಿತರ ಬಗ್ಗೆ, ವಯಸ್ಸಾದವರ ಬಗ್ಗೆ ಮತ್ತು ಇಂದಿನ ತಾಂತ್ರಿಕತೆ ಮತ್ತು ಮಾರುಕಟ್ಟೆ – ಆಧಾರಿತ ಸಮಾಜದಲ್ಲಿ ಏಕಾಂಗಿಗಳಾಗಿರುವವರ ಬಗ್ಗೆ ವಿಶೇಷ ಕಾಳಜಿಯನ್ನು ತೋರಿಸಲು ಕರೆನೀಡುತ್ತಿದ್ದೇನೆ. ಈ ಕಾರ್ಯಗಳನ್ನು ದೇವರ "ದೃಷ್ಟಿಕೋನದಲ್ಲಿ", ಅನ್ಯೋನ್ಯತೆ, ಕಾಳಜಿ ಹಾಗೂ ಅನುಕಂಪದಿಂದ ಮತ್ತು ನಿರ್ದಿಷ್ಟ ಸಂದರ್ಭಗಳಲ್ಲಿ ವ್ಯಕ್ತಿಗತ ಸಂಬಂಧಗಳ ಮೂಲಕ ಮಾಡಬೇಕಾಗಿದೆ (cf. Evangelii Gaudium, 127–128). ಇಂತವರೇ ಅನೇಕ ಬಾರಿ ನಮಗೆ ಭರವಸೆಯ ಜೀವನ ಎಂದರೆ ಏನು ಎಂಬುದನ್ನು ಕಲಿಸುವವರಾಗುತ್ತಾರೆ. ವ್ಯಕ್ತಿಗತ ಸಂಪರ್ಕದಿಂದ ನಾವು ಪ್ರಭುವಿನ ಕರುಣಾಮಯಿ ಹೃದಯದ ಪ್ರೀತಿಯನ್ನು ಅವರಿಗೆ ತೋರಿಸುತ್ತೇವೆ. ಈ ಮೂಲಕ ನಾವು ಕ್ರಿಸ್ತರ ಪೂಜ್ಯ ಹೃದಯವು ಸುವಾರ್ತ ಪ್ರಸಾರದ ಆರಂಭಿಕ ಭೋಧನೆಯ ಸಾರ ಎಂಬುದನ್ನು ಅರಿತುಕೊಳ್ಳುತ್ತೇವೆ." (Dilexit Nos, 32). ಇಲ್ಲಿಂದ ನಾವು ದೇವರಲ್ಲಿ ನೆಲೆಗೊಂಡಿರುವ ನಿರೀಕ್ಷೆಯಲ್ಲಿ ಬೆಳೆಯುತ್ತೇವೆ. (1 ಪೇತ್ರ 1:21) ಹಾಗೂ ಸಕಲ ಸಾಂತ್ವನವನ್ನೀಯುವ ದೇವರಿಂದ ಪಡೆದ ಸಾಂತ್ವನವನ್ನು ಇತರರಿಗೆ ತೋರಿಸಲು ಶಕ್ತರಾಗುತ್ತೇವೆ. (2 ಕೊರಿಂಥ 1:3–4). ಯೇಸುವಿನ ಮಾನವೀಯ ಹಾಗು ದೈವಿಕ ಹೃದಯದಲ್ಲಿ ದೇವರು ಪ್ರತಿ ಸ್ತ್ರೀ–ಪುರುಷರೊಂದಿಗೆ ಮಾತನಾಡ ಬಯಸುತ್ತಾರೆ. ಹೀಗೆ ನಮ್ಮೆಲ್ಲರನ್ನೂ, ತಮ್ಮ ಪ್ರೀತಿಯೆಡೆಗೆ ಸೆಳೆಯುತ್ತಾರೆ. "ನಾವೆಲ್ಲರೂ ಈ ಸುವಾರ್ತಾ ಸೇವೆಯನ್ನು ಮುಂದುವರಿಸಲು ಕಳುಹಿಸಲ್ಪಟ್ಟಿರುತ್ತೇವೆ: ಹೀಗೆ ನಾವು ಇಡೀ ವಿಶ್ವದಲ್ಲಿ ಕ್ರಿಸ್ತರ ಪೂಜ್ಯ ಹೃದಯದ ಹಾಗೂ ತಂದೆಯ ಪೀತಿಯ ಚಿಹ್ನೆಗಳಾಗುತ್ತೇವೆ" (Address to Participants in the General Assembly of the Pontifical Mission Societies, 3rd June 2023).

3. **ಭರವಸೆಯ ಸುವಾರ್ತಾ ಸೇವೆಯ ನವೀಕರಣ:**

ಭರವಸೆಯ ಸುವಾರ್ತಾ ಸೇವೆಯು ಅತ್ಯಗತ್ಯವಾಗಿರುವ ಇಂದಿನ ಪರಿಸ್ಥಿಯಲ್ಲಿ ಕ್ರಿಸ್ತರ ಶಿಷ್ಯರು ತಾವು ಹೇಗೆ ಭರವಸೆಯ "ಸಾಧಕ"ರಾಗಬಹುದು ಮತ್ತು ಆಗಾಗ್ಗೆ ದಿಕ್ಕು ತೋಚದೆ ಇರುವ ಮತ್ತು ಅತೃಪ್ತಿಯಲ್ಲಿರುವ ಮನುಕುಲಕ್ಕೆ ದಾರಿದೀಪವಾಗಬಹುದು ಎಂಬುದನ್ನು ಮೊದಲು ಕಂಡುಕೊಳ್ಳಬೇಕು.

ಇದು ಸಾಧ್ಯವಾಗಬೇಕಾದರೆ ನಾವು ಪ್ರತಿ ದಿವ್ಯ ಬಲಿಪೂಜೆಯಲ್ಲೂ, ವಿಶೇಷವಾಗಿ ಆರಾಧನಾವಿಧಿ ವರ್ಷದ ಕೇಂದ್ರ ಬಿಂದುವಾಗಿರುವ ಮತ್ತು ಪರಿಪೂರ್ಣತೆಯಾಗಿರುವ ಪಾಸ್ಖ ತ್ರಿದಿನಗಳ ಆರಾಧನವಿಧಿಗಳಲ್ಲೂ ಪಡೆಯುವ ಪಾಸ್ಖ-ಆಧ್ಯಾತ್ಮಿಕ ಅನುಭವದಿಂದ ನವೀಕರಿಸಲ್ಪಡಬೇಕು. ನಾವೆಲ್ಲರೂ ದೀಕ್ಷಾಸ್ನಾನದಲ್ಲಿ ಕ್ರಿಸ್ತರ ಶಿಲುಬೆ ಮರಣ ಹಾಗೂ ಪುನರುತ್ಥಾನದಲ್ಲಿ ಭಾಗಿಗಳಾಗಿ ನಿತ್ಯಜೀವನ ಭಾಗ್ಯಕ್ಕೆ ಪಾತ್ರರಾಗಿದ್ದೇವೆ. ಈ ಮೂಲಕ ನಾವು ಇತಿಹಾಸದ ನಿತ್ಯ ವಸಂತಕಾಲವಾಗಿರುವ ಪ್ರಭುವಿನ ಪಾಸ್ಖ ಪ್ರಜೆಗಳಾಗಿದ್ದೇವೆ. ಈ ಕಾರಣದಿಂದ ನಾವು ಭರವಸೆಯ ವಸಂತ ಕಾಲಕ್ಕೆ ಸೇರಿದ ಜನತೆ. ಈ ಭರವಸೆಯನ್ನು ನಾವು ಎಲ್ಲರೊಂದಿಗೂ ಹಂಚಿಕೊಳ್ಳಬೇಕು. "ಮರಣ ಹಾಗೂ ದ್ವೇಷ ಅಂತಿಮವಲ್ಲ" ಎಂಬುದನ್ನು ನಾವು ವಿಶ್ವಾಸಿಸುತ್ತೇವೆ ಮತ್ತು ಅರಿತುಕೊಂಡಿದ್ದೇವೆ. (cf. Catechesis, 23 August 2017). ಆರಾಧನಾ ವಿಧಿ ಆಚರಣೆಗಳ ಮತ್ತು ಸಂಸ್ಕಾರಗಳ ಮೂಲಕ ಪಾಸ್ಖ ರಹಸ್ಯಗಳನ್ನು ಇಂದಿನ ವರ್ತಮಾನ ಕಾಲಕ್ಕೆ ಅನ್ವಯಿಸಿ ಅನುಭವಿಸುವ ಮುಖಾಂತರ ನಾವು ಪವಿತ್ರಾತ್ಮರ ಶಕ್ತಿಯನ್ನು ಪಡೆಯುತ್ತೇವೆ. ಈ ಶಕ್ತಿಯಿಂದ ದೃಢತೆಯನ್ನು ಪಡೆದ ನಾವು ಪ್ರಪಂಚದಾದ್ಯಂತ ಸುವಾರ್ತ ಪ್ರಸಾರ ಸೇವಾಕಾರ್ಯವನ್ನು ಶ್ರದ್ಧೆಯಿಂದ, ಬದ್ಧತೆಯಿಂದ ಹಾಗೂ ತಾಳ್ಮೆಯಿಂದ ಮಾಡಲು ಶಕ್ತರಾಗುತ್ತೇವೆ. "ಪುನರುತ್ಥಾನರಾಗಿ ಮಹಿಮೆಗೆ ಏರಿಸಲ್ಪಟ್ಟ ಕ್ರಿಸ್ತರು ನಮ್ಮ ಭರವಸೆಯ ಚಿಲುಮೆಯಾಗಿದ್ದಾರೆ ಮತ್ತು ಅವರು ನಮಗೆ ವಹಿಸಿರುವ ಸುವಾರ್ತ ಸೇವಾ ಜವಾಬ್ದಾರಿಯನ್ನು ನಿರ್ವಹಿಸಲು ನಮಗೆ ಅಗತ್ಯವಿರುವ ಎಲ್ಲಾ ನೆರವನ್ನೂ ನೀಡುವವರಾಗಿದ್ದಾರೆ" (Evangelii Gaudium, 275). "ದೇವರ ಕೊಡುಗೆಯಾಗಿರುವ ಮತ್ತು ಕ್ರೈಸ್ತರಿಗೆ ಸೇವಾಕಾರ್ಯವಾಗಿರುವ" ಪವಿತ್ರ ಭರವಸೆಗೆ ಅವರಲ್ಲಿ ನಾವು ಬಾಳುತ್ತಾ ಸಾಕ್ಷಿ ಕೊಡುವವರಾಗಿದ್ದೇವೆ. (Hope is a light in the night, Vatican City 2024, 7).

ಭರವಸೆಯ ಸುವಾರ್ತ ಪ್ರಸಾರಕರು ಪ್ರಾರ್ಥನಾ ವ್ಯಕ್ತಿಗಳಾಗಿರುತ್ತಾರೆ. ಈ ಬಗ್ಗೆ ದೀರ್ಘಕಾಲ ಸೆರೆವಾಸದಲ್ಲಿದ್ದರೂ, ತಪ್ಪದೆ ಪ್ರಾರ್ಥನೆಯಲ್ಲಿ ನಿರತರಾಗಿ, ದಿವ್ಯಬಲಿಪೂಜೆಯನ್ನು ಅರ್ಪಿಸಿ ಭರವಸೆಯಿಂದ ಸೆರೆಮನೆಯಲ್ಲಿ ಬಾಳಿದ ವೆನೆರೆಬಲ್ ಕಾರ್ಡಿನಲ್ Francois-Xavier Van Thuan ರವರು ಹೇಳುವುದೇನೆಂದರೆ "ಭರವಸೆಯಿಂದಿರುವ ವ್ಯಕ್ತಿಗಳು ಪ್ರಾರ್ಥಿಸುವ ವ್ಯಕ್ತಿಗಳಾಗಿರುತ್ತಾರೆ." (cf. The Road of Hope, Boston, 2001, 963). ಪ್ರಾರ್ಥನೆಯು ಸುವಾರ್ತ ಪ್ರಸಾರ ಸೇವಾಕಾರ್ಯದ ಪ್ರಥಮ ಚಟುವಟಿಕೆಯಾಗಿರುತ್ತದೆ ಹಾಗೂ ಅದು "ಭರವಸೆಯ ಮೂಲ ಶಕ್ತಿಯಾಗಿದೆ". (Catechesis, 20 May 2020).

ಆದ್ದರಿಂದ ಪ್ರಾರ್ಥನೆಯಿಂದ ವಿಶೇಷವಾಗಿ ದೇವರ ವಾಕ್ಯವನ್ನು ಆದರಿಸಿದ ಪ್ರಾರ್ಥನೆಯಿಂದ, ಅದರಲ್ಲೂ ಪವಿತ್ರಾತ್ಮರೇ ರಚಿಸಿರುವ ಶ್ರೇಷ್ಠ ಕಾವ್ಯಮಯ ಪ್ರಾರ್ಥನಾಗುಚ್ಛವಾಗಿರುವ ಕೀರ್ತನೆಗಳಿಂದ ಭರವಸೆಯ ಸುವಾರ್ತ ಪ್ರಸಾರ ಸೇವಾಕಾರ್ಯದ ನವೀಕರಣವನ್ನು ಆರಂಭಿಸೋಣ (cf. Catechesis, 19 June 2024). ಕೀರ್ತನೆಗಳು, ವಿಪತ್ತುಗಳ ಸಮಯದಲ್ಲಿ ಭರವಸೆಯಿಂದಿರಲು, ನಮ್ಮ ಸುತ್ತಮುತ್ತಲೂ ಭರವಸೆಯ ಚಿಹ್ನೆಗಳನ್ನು ವಿವೇಚಿಸಲು, ಎಲ್ಲಾ ಜನಾಂಗಗಳೂ ದೇವರನ್ನೂ ಸ್ತುತಿಸಲಿ ಎಂಬ "ಸುವಾರ್ತಾ ಸೇವೆ"ಯ ಆಶಯವನ್ನು ನಮ್ಮಲ್ಲಿ ಉದ್ದೀಪನಗೊಳಿಸಲು ನಮಗೆ ತರಬೇತಿಯನ್ನು ಕೊಡುತ್ತವೆ. (cf. ಕೀರ್ತನೆ 41:12; 67:4). ಪ್ರಾರ್ಥಿಸುವುದರಿಂದ ದೇವರು ನಮ್ಮಲ್ಲಿ ಹೊತ್ತಿಸಿರುವ ಭರವಸೆಯ ಕಿಡಿ ಆರದಂತೆ ನಾವು ನೋಡಿಕೊಳ್ಳುತ್ತೇವೆ. ಈ ಮೂಲಕ ಈ ಕಿಡಿಯು ದೊಡ್ಡ ಬೆಂಕಿಯಾಗಿ ಅದು ನಮ್ಮ ಸುತ್ತುಮುತ್ತಲಿರುವ ಎಲ್ಲರಿಗೂ ದಾರಿದೀಪವಾಗುತ್ತದೆ; ಅಂತೆಯೇ ಪ್ರಾರ್ಥನೆಯು ನಮ್ಮಲ್ಲಿ ಸತ್ಕ್ರಿಯೆಗಳನ್ನು ಪ್ರೇರೇಪಿಸುತ್ತದೆ, ಮಾತ್ರವಲ್ಲದೆ ನಮ್ಮ ಹಾವಭಾವಗಳು ಯುಕ್ತವಾಗಿರುವಂತೆ ಮಾಡುತ್ತದೆ.

ಅಂತಿಮವಾಗಿ, ಸುವಾರ್ತ ಪ್ರಸಾರ ಸೇವಾ ಕಾರ್ಯವು ಕ್ರೈಸ್ತ ಭರವಸೆಯಂತೆ ಯಾವಾಗಲೂ ಒಂದು ಸಮುದಾಯ ಪ್ರಕ್ರಿಯೆಯಾಗಿದೆ (Benedict XVI, Spe Salvi, 14). ಈ ಪ್ರಕ್ರಿಯೆಯು ಆರಂಭಿಕ ಸುವಾರ್ತ ಬೋಧನೆಯಿಂದ ಹಾಗೂ ದೀಕ್ಷಾಸ್ನಾನದಿಂದ ಮುಗಿಯುವುದಿಲ್ಲ. ಆದರೆ ದೀಕ್ಷಾಸ್ನಾನ ಸ್ವೀಕರಿಸಿರುವ ಪ್ರತಿ ವ್ಯಕ್ತಿಯನ್ನೂ ಸುವಾರ್ತೆಯ ದಾರಿಯಲ್ಲಿ ನಡೆಸುತ್ತಾ ಕ್ರೈಸ್ತ ಸಮುದಾಯಗಳನ್ನು ಕಟ್ಟುವ ತನಕ ಮುಂದುವರಿಯುತ್ತದೆ. ಈ ಆಧುನಿಕ ಸಮಾಜದಲ್ಲಿ ಧರ್ಮಸಭೆಯ ಸದಸ್ಯತ್ವವು ಏಕ ಪ್ರಕಾರವಾಗಿರುವುದಿಲ್ಲ, ಅದು ಸಂಕೀರ್ಣಮಯವಾಗಿರುತ್ತದೆ. ಈ ಕಾರಣದಿಂದ ಒಬ್ಬರಿಂದ ಇನ್ನೊಬ್ಬರಿಗೆ ಹಸ್ತಾಂತರಿಸುತ್ತಾ, ಆಳವಾದ ವಿಶ್ವಾಸವನ್ನು ಬೆಳೆಸುವ ಪ್ರಕ್ರಿಯೆಯು "ಧರ್ಮಸಭೆಯ ಎಲ್ಲಾ ಕಾರ್ಯಕಲಾಪಗಳಲ್ಲೂ ಎದ್ದು ಕಾಣುತ್ತದೆ." (Evangelii Gaudium,15). ಇದು ಸಾಧ್ಯವಾಗಬೇಕಾದರೆ ಪ್ರಾರ್ಥನೆ ಮತ್ತು ಕ್ರಿಯೆಯು ಜೊತೆ ಜೊತೆಯಾಗಿ ಸಾಗಬೇಕು. ಇಲ್ಲಿ ನಾನು ಮಗದೊಮ್ಮೆ ಒತ್ತಿ ಹೇಳುವುದೇನೆಂದರೆ ಧರ್ಮಸಭೆಗೆ ಸಿನೋಡ್ ಮಾದರಿಯ ಸುವಾರ್ತ ಪ್ರಸಾರ ಸೇವೆ ಅತ್ಯಗತ್ಯವಾಗಿದೆ. ಅಂತೆಯೇ 'ಪೊಂತಿಫಿಕಲ್ ಮಿಶನ್ ಸೊಸೈಟಿಗಳು' ದೀಕ್ಷಾಸ್ನಾನ ಪಡೆದವರಿಗೆ ಸುವಾರ್ತ ಪ್ರಸಾರ ಸೇವಾ ಕಾರ್ಯದಲ್ಲಿ ತರಬೇತಿಯನ್ನು ಆಯೋಜಿಸಿ ಪ್ರೋತ್ಸಾಹಿಸುವುದು ಮತ್ತು ಹೊಸ ಸುವಾರ್ತ ಕೇಂದ್ರಗಳಿಗೆ ನೆರವನ್ನು ನೀಡುವುದು ಅತ್ಯಗತ್ಯವಾಗಿದೆ. ನಾನು ಎಲ್ಲರಲ್ಲಿ, ಮಕ್ಕಳಲ್ಲಿ, ಯುವಜನರಲ್ಲಿ, ವಯಸ್ಕರಲ್ಲಿ, ಹಿರಿಯರಲ್ಲಿ ವಿನಂತಿಸುವುದು ಏನೆಂದರೆ, ನೀವೆಲ್ಲರೂ ನಿಮ್ಮ ಸಾಕ್ಷಿ ನೀಡುವ ಜೀವನದ ಮೂಲಕ, ಪ್ರಾರ್ಥನೆಯ ಮೂಲಕ, ತ್ಯಾಗಗಳ ಮತ್ತು ಉದಾರತೆಯ ಮೂಲಕ ಸಕ್ರಿಯವಾಗಿ ಧರ್ಮಸಭೆಯ ಸುವಾರ್ತ ಪ್ರಸಾರ ಸೇವಾ ಕಾರ್ಯದಲ್ಲಿ ಪಾಲ್ಗೊಳ್ಳಿ. ಇದಕ್ಕಾಗಿ ನಿಮ್ಮೆಲ್ಲರಿಗೂ ವಂದನೆಗಳು.

ಆತ್ಮೀಯ ಸಹೋದರಿಯರೇ ಹಾಗೂ ಸಹೋದರರೇ, ನಾವೆಲ್ಲರೂ ಯೇಸುಕ್ರಿಸ್ತರ ತಾಯಿ ಹಾಗೂ ನಮ್ಮ ಭರವಸೆಯಾಗಿರುವ ಮಾತೆ ಮರಿಯಮ್ಮನವರನ್ನು ಸ್ಮರಿಸಿಕೊಳ್ಳೋಣ. ಅವರ ವಶಕ್ಕೆ ಈ ಜೂಬಿಲಿಗಾಗಿ ಮತ್ತು ಮುಂದಿನ ವರ್ಷಗಳಿಗಾಗಿ ನಮ್ಮ ಪ್ರಾರ್ಥನೆಯನ್ನು ಒಪ್ಪಿಸೋಣ: "ಎಲ್ಲರನ್ನೂ ಕುರಿತು ದೇವರ ಪ್ರೀತಿಯ ಈ ಸಂದೇಶವನ್ನು ನೀಡುವಾಗ, ಕ್ರೈಸ್ತ ಭರವಸೆಯ ಬೆಳಕು ಸರ್ವರನ್ನೂ ಬೆಳಗಲಿ!! ಅಂತೆಯೇ ಧರ್ಮಸಭೆಯು ಎಲ್ಲೆಡೆಯೂ ಈ ಸಂದೇಶಕ್ಕೆ ಪ್ರಾಮಾಣಿಕ ಸಾಕ್ಷಿಯನ್ನು ನೀಡಲಿ." (Bull Spes Non Confundit, 6)

**ರೋಮ್, ಸಂತ ಜಾನ್ ಲಾತೆರಾನ್, 25 ಜನವರಿ 2025, ಸಂತ ಪೌಲರ ಮನ ಪರಿವರ್ತನೆಯ ಹಬ್ಬ,**

**ಫ್ರಾನ್ಸಿಸ್**